6.	Bhairapur (NT)	-do-
7.	Honnihalli (NT)	-do-
8.	Nidasoshihatti (NT)	Fresh work plans and estimates to be santioned.
9.	Gavanal (NT)	-do-
10.	Masarguppi (NT)	-do-
11.	Kurnivadi (NT)	This is dropped due to the scheme included in World Bank Aid Programme.
12.	Salamwadi (NT)	Plans & Estimates to be sanctioned.
13	Khot Dhondagatti Bellanki (NT)	Source required, plans & estimates to be sanctioned.

ಸೇತುವೆಯ ನೇಗಿದಾಳ ಹತ್ತಿರ ಹಿರಣ್ಯಕೇಶಿ ನದಿಗೆ ಸೇತುವೆಯ ನಿರ್ಮಾಣ

957 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಧೋಡಗೇರಿ ನೇಗಿದಾಳ ಮಧ್ಯದಲ್ಲಿ ಹಿರಣ್ಯಕೇಶಿ ನದಿಗೆ ಸೇತುವೆ ನಿರ್ಮಿಸಲು ಸರಕಾರವು ಕ್ರಮ ಕೈಕೊಳ್ಳುವುದೆ?*

ಆ) *ನದಿಯ ದಕ್ಷಿಣ ಭಾಗದ ಜನರು ತಾಲ್ಲೂಕಾ ಸ್ಥಳಕ್ಕೆ ಬರಬೇಕಾದರೆ 9-25 ಕಿ.ಮೀ. ಮತ್ತು ತಿಗೆದು ಬರಬೇಕಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಸೇತುವೆ ನಿರ್ಮಿಸಿ ಸಾರ್ವಜನಿಕರಿಗೆ ತೊಂದರೆ ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸಧ್ಯದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

ಆ) ಹೌದು.

ಇ) ಈ ಬಗ್ಗೆ ಪರಿಶೀಲಿಸಲಾಗುವುದು.

ಜಿಲ್ಲಾ ಪರಿಷತ್‌ಗಳ ರಸ್ತೆ ಹಾಗೂ ಸೇತುವೆಗಳ ದುರಸ್ತಿ

985-ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಈ ವರ್ಷದ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಆದ ಅತಿವೃಷ್ಟಿಯಿಂದ ಸಕಲೇಶಪುರ ಕ್ಷೇತ್ರದಲ್ಲಿ ರಸ್ತೆ ಹಾಗೂ ಸೇತುವೆಗಳು ಹಾನಿಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಹಾನಿಗೊಳಗಾಗಿರುವ ಆ ರಸ್ತೆ ಮತ್ತು ಸೇತುವೆಗಳನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.